# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ
# ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ : 184 / 2021

ಪಿರ್ಯಾದುದಾರರು : ಚಿನ್ನಪ್ಪ ಬಿನ್ ಚೌರಪ್ಪ
48 ವರ್ಷಗಳು, ಜಾರ್ಜ್ ನಗರ
ಸೋಲೂರು ಗ್ರಾಮ, ಸೋಲೂರು
ಹೋಬಳಿ, ಮಾಗಡಿ ತಾಲ್ಲೂಕು.

**ವಿರುದ್ಧ**

**ಆರೋಪಿ-1** : **ಭರತ್ ಎಂ.ಆರ್ ಬಿನ್ ಯಲ್ಲಪ್ಪ**
**38 ವರ್ಷಗಳು, ಮುಮ್ಮೇನಹಳ್ಳಿ ಗ್ರಾಮ**
**ಸೋಲೂರು ಗ್ರಾಮ, ಸೋಲೂರು**
**ಹೋಬಳಿ, ಮಾಗಡಿ ತಾಲ್ಲೂಕು.**

## <u>ಆಪಾದನೆ</u>

ಈ ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ ಕಾನೂನು ಬದ್ದ ಹಾಗೂ ಕುಟುಂಬದ ಅವಶ್ಯಕತೆಗಾಗಿ 4,25,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣ ಪಾವತಿಗಾಗಿ ನಿಮ್ಮ ಎಸ್.ಬಿ.ಐ ಬ್ಯಾಂಕ್, ಮೋಟಗೊಂಡನಹಳ್ಳಿ ಶಾಖೆ, ಚೆಕ್ ಸಂಖ್ಯೆ:941574, ದಿನಾಂಕ: 08-12-2020 ರ ಮೊತ್ತ 4,25,000/- ಹಣವನ್ನು ನಮೂದಿಸಿ, ಪಿರ್ಯಾದಿಗೆ ನೀಡಿದ್ದು, ಸದರಿ ಚೆಕ್ ಅನ್ನು ನಗದೀಕರಿಸಲು ಪಿರ್ಯಾದಿಯು ತನ್ನ ಕರ್ನಾಟಕ ಗ್ರಾಮೀಣ ಬ್ಯಾಂಕ್, ಸೋಲೂರು ಶಾಖೆಯಲ್ಲಿ ಹಾಜರು ಪಡಿಸಿದ್ದು, ಸದರಿ ಬ್ಯಾಂಕ್‌ನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ " Funds Insufficient " ಎಂಬ ಹಿಂಬರಹದೊಂದಿಗೆ ಸದರಿ ಚೆಕ್ ದಿನಾಂಕ: 11-12-2020 ರಂದು ಅಮಾನ್ಯ ಮಾಡಿದ್ದು, ಆ ಸಂಬಂಧ ಪಿರ್ಯಾದಿಯು ದಿನಾಂಕ: 28-12-2020 ರಂದು ನಿಮಗೆ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ಜಾರಿಯಾಗಿದ್ದರೂ

ಸಹ ನೀವು ಉದ್ದೇಶ ಪೂರ್ವಕವಾಗಿ ಹಣವನ್ನು ಪಾವತಿ ಮಾಡಿರುವುದಿಲ್ಲ. ಆ ಮೂಲಕ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ-138 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಹಿರುವುದಾಗಿ ನಿಮ್ಮ ವಿರುದ್ದ ಆರೋಪಿಸಲಾಗಿದೆ.

ಪ್ರಶ್ನೆ-1 ಃ ಈ ಮೇಲೆ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ ?

ಆರೋಪಿ ಉತ್ತರ ಃ

ಪ್ರಶ್ನೆ-2 ಃ ನೀವು ಆಪಾದನೆಯನ್ನು ಒಪ್ಪುಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

ಆರೋಪಿ ಉತ್ತರ ಃ

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 28-04-2022 ರಂದು ಸಹಿ ಮಾಡಿರುತ್ತಾರೆ )

( ನಳಿನ ಎಸ್.ಸಿ. )
ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.

**ಆರೋಪಿ ಸಹಿ ಃ**

# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ
# ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 184 / 2021

| | | |
|---|---|---|
| ಪಿರ್ಯಾದುದಾರರು | ಃ | ಚಿನ್ನಪ್ಪ ಬಿನ್ ಚೌರಪ್ಪ<br>48 ವರ್ಷಗಳು, ಜಾರ್ಜ್ ನಗರ<br>ಸೋಲೂರು ಗ್ರಾಮ, ಸೋಲೂರು<br>ಹೋಬಳಿ, ಮಾಗಡಿ ತಾಲ್ಲೂಕು. |

**ವಿರುದ್ಧ**

| | | |
|---|---|---|
| **ಆರೋಪಿ-1** | ಃ | **ಭರತ್ ಎಂ.ಆರ್ ಬಿನ್ ಯಲ್ಲಪ್ಪ<br>38 ವರ್ಷಗಳು, ಮುಮ್ಮೇನಹಳ್ಳಿ ಗ್ರಾಮ<br>ಸೋಲೂರು ಗ್ರಾಮ, ಸೋಲೂರು<br>ಹೋಬಳಿ, ಮಾಗಡಿ ತಾಲ್ಲೂಕು.** |

## ಕಲಂ-313 ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತನ ಹೇಳಿಕೆ

**ಪ್ರಶ್ನೆ-1ಃ** ಆರೋಪಿಯಾದ ನಿಮ್ಮ ವಿರುದ್ದ ಸಾಕ್ಷಿದಾರರು ನೀಡಿರುವ ಸಾಕ್ಷಿಯನ್ನು ನೀವು ಕೇಳಿದ್ದೀರಾ ?

**ಆರೋಪಿ ಉತ್ತರ ಃ**

**ಪ್ರಶ್ನೆ-2 ಃ ಪ್ರಾಸಾ-1 ಃ ಚಿನ್ನಪ್ಪ** ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪ್ರಾಸಾ-1 ರವರಿಂದ ನಿಮ್ಮ ಕಾನೂನು ಬದ್ದ ಹಾಗೂ ಕುಟುಂಬದ ಅವಶ್ಯಕತೆಗಾಗಿ 4,25,000/- ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೀರಾ ಎಂದು ಸಾಕ್ಷಿ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-3 ಃ ಪ್ರಾಸಾ-1** ತಮ್ಮ ಸಾಕ್ಷ್ಯದಲ್ಲಿ ಸದರಿ ಹಣವನ್ನು ಹಿಂದುರುಗಿಸುವ

ಸಲುವಾಗಿ ನಿಮ್ಮ ಎಸ್.ಬಿ.ಐ ಬ್ಯಾಂಕ್, ಮೋಟಗೊಂಡನಹಳ್ಳಿ ಶಾಖೆ, ಚೆಕ್ ಸಂಖ್ಯೆಃ941574, ದಿನಾಂಕಃ 08-12-2020 ರ ಮೊತ್ತ 4,25,000/- ಹಣವನ್ನು ನಮೂದಿಸಿ ಚೆಕ್ಕನ್ನು ಕೊಟ್ಟಿರುತ್ತೀರಿ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-4 ಃ ಪ್ರಾಸಾ-1** ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನೀಡಿರುವ ಚೆಕ್ಕನ್ನು ನಗದೀಕರಿಸಲು ತನ್ನ ಕರ್ನಾಟಕ ಗ್ರಾಮೀಣ ಬ್ಯಾಂಕ್, ಸೋಲೂರು ಶಾಖೆಯಲ್ಲಿ ಹಾಜರು ಪಡಿಸಿದ್ದು, ಸದರಿ ಬ್ಯಾಂಕ್‌ನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ " Funds Insufficient " ಎಂಬ ಹಿಂಬರಹದೊಂದಿಗೆ ಸದರಿ ಚೆಕ್ ದಿನಾಂಕಃ 11-12-2020 ರಂದು ಅಮಾನ್ಯ ಮಾಡಿರುತ್ತಾರೆಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-5 ಃ ಪ್ರಾಸಾ-1** ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿಮಗೆ ದಿನಾಂಕಃ 28-12-2020 ರಂದು ವಕೀಲರ ಮೂಲಕ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ಜಾರಿಯಾಗಿದ್ದರೂ ಕೂಡ ಇದುವರೆವಿಗೂ ಹಣವನ್ನು ಪಾವತಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-6 ಃ ಪ್ರಾಸಾ-1** ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಉದ್ದೇಶ ಪೂರ್ವಕವಾಗಿ ಮೋಸ ಮಾಡುವ ಉದ್ದೇಶದಿಂದ ಪ್ರಾಸಾ-1 ರವರಿಗೆ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿರುವ ಚೆಕ್ಕನ್ನುಕೊಟ್ಟು ಬ್ಯಾಂಕಿಗೆ ಹಾಜರು

ಪಡಿಸುವಂತೆ ತಿಳಿಸಿ ಮೋಸ ಮಾಡಿರುತ್ತೀರಿ ಎಂದು ಸಾಕ್ಷಿ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-7 ಃ** ನೀವು ಏನಾದರೂ ಹೇಳಲು ಬಯಸುವಿರಾ ?

**ಆರೋಪಿ ಉತ್ತರ ಃ**

**ಪ್ರಶ್ನೆ-8 ಃ** ನಿಮ್ಮ ಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?

**ಆರೋಪಿ ಉತ್ತರ ಃ**

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 28-04-2022 ರಂದು ಸಹಿ ಮಾಡಿರುತ್ತಾರೆ )

( ನಳಿನ ಎಸ್‌ಸಿ. )
ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.

**ಆರೋಪಿ ಸಹಿ ಃ**